**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1947/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಡಾ.ಹೇಮಂತ್ ಭಟ್ | ಫ್ರಾಸಾ-10 |
| ತಂದೆಯ ಹೆಸರು | : ನಂದಕುಮಾರ್ ಭಟ್ | ಚಾಸಾ-15 |
| ವಯಸ್ಸು | : 53 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಅರವಳಿಕೆ ತಜ್ಞರು | ದಿನಾಂಕಃ 06.05.2025. |
| ವಾಸಸ್ಥಳ | : ಮೂಡಿಗೆರೆ ಸರ್ಕಾರಿ ಆಸ್ಪತ್ರೆ. | |

**:ಮುಖ್ಯ ವಿಚಾರಣೆಃ ಫ್ರಾಜ್ಞ್ಯಾಸ.ಸ.ಅ. ರವರಿಂದ:**

ನಾನು ದಿ.05.06.2014 ರಿಂದ ಇಲ್ಲಿಯವರೆಗೂ ಮೂಡಿಗೆರೆ ಸರ್ಕಾರಿ ಆಸ್ಪತ್ರೆಯಲ್ಲಿ ಅರವಳಿಕೆ ತಜ್ಞರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ.12.08.2023 ರಂದು ಮ.2.15 ರ ಸಮಯಕ್ಕೆ ಚಾಸಾ-1 ರವರು ಆ ದಿನ ಮ.1.45 ರ ಸಮಯಕ್ಕೆ ಮುದ್ರೆಮನೆ ಕಾಫೀ ಕ್ಯೂರಿಂಗ್ ಬಳಿ ರಸ್ತೆ ಅಪಘಾತಕ್ಕೆ ಒಳಗಾದ ಬಗ್ಗೆ ಚಿಕಿತ್ಸೆಗೆಂದು ಹಾಜರಾಗಿದ್ದು ನಾನು ಅವರನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡುಬಂತು.

1. ತಲೆಯ ಮೇಲ್ಭಾಗದ ಎಡಭಾಗದಲ್ಲಿ 10x1x1 ಸೆ.ಮೀ.ನಷ್ಟು ಕಡಿದು ಛಿದ್ರವಾದ ಗಾಯ.

2. ಬಲಕೆನ್ನೆಯ ಮೇಲೆ 2x3 ಸೆ.ಮೀ ನಷ್ಟು ತರಚಿದ ಗಾಯ.

3. ಬಲಕೆನ್ನೆ ಮತ್ತು ಬಾಯಿಯ ಬಲಭಾಗದಲ್ಲಿ 2x1x1 ಸೆ.ಮೀ.ನಷ್ಟು ಕಡಿದು ಛಿದ್ರವಾದ ಗಾಯ.

4. ಕುತ್ತಿಗೆಯ ಎಡಭಾಗದಲ್ಲಿ ಗದ್ದದಿಂದ 2 ಸೆ.ಮೀ ಕೆಳಗೆ 4x1x1 ಸೆ.ಮೀ.ನಷ್ಟು ಕಡಿದು ಛಿದ್ರವಾದ ಗಾಯ.

ಆ ದಿನ ಚಾಸಾ-1 ರವರನ್ನು ಹೆಚ್ಚಿನ ಚಿಕಿತ್ಸೆಗೆ ಬೇರೆ ಆಸ್ಪತ್ರೆಗೆ ಹೋಗುವಂತೆ ಸೂಚಿಸಿರುತ್ತೇನೆ. ನಂತರ ಕೆ.ಎಂ.ಸಿ ಆಸ್ಪತ್ರೆ ಮಂಗಳೂರು ಮತ್ತು ಸುಚಿರಾಯು ಆಸ್ಪತ್ರೆ, ಹುಬ್ಬಳ್ಳಿ ಆಸ್ಪತ್ರೆಗಳಿಂದ ನೀಡಲಾದ ಚಾಸಾ-1 ರವರ ಡಿಸ್ ಚಾರ್ಜ್ ಸಮ್ಮರಿಯ ಆಧಾರದ ಮೇಲೆ ಚಾಸಾ-1 ರವರು ಕೆ.ಎಂ.ಸಿ ಆಸ್ಪತ್ರೆಯಲ್ಲಿ ದಿ.12.08.2023 ರಿಂದ 13.08.2023 ರವರೆಗೂ ಹಾಗೂ ಸುಚಿರಾಯು ಆಸ್ಪತ್ರೆಯಲ್ಲಿ ದಿ.14.08.2023 ರಿಂದ 17.08.2023 ರವರೆಗೂ ಚಿಕಿತ್ಸೆ ಪಡೆದಿರುವುದು ಹಾಗೂ ಸದರಿ ಆಸ್ಪತ್ರೆಯಲ್ಲಿ ತಲೆಯ ಎಡಭಾಗದಲ್ಲಿ ಇದ್ದ ಊತ ಮತ್ತು D-4 ಮೂಳೆ ಮುರಿತಕ್ಕೊಳಗಾದ ಬಗ್ಗೆ ಚಿಕಿತ್ಸೆ ಪಡೆದಿರುವುದು ತಿಳಿದುಬಂದಿರುತ್ತದೆ.

ನನ್ನ ಪ್ರಕಾರ ಚಾಸಾ-1 ರವರಿಗೆ ಆದ ಮೇಲೆ ಹೇಳಿದಂತೆ ಕ್ರ.ಸಂ.1 ರಿಂದ 4 ರ ಗಾಯಗಳು ಸಾಮಾನ್ಯ ಸ್ವರೂಪದ್ದಾಗಿದ್ದು, D-4 ಮೂಳೆ ಮುರಿತವು ಗಂಭೀರ ಸ್ವರೂಪದ್ದಾಗಿರುತ್ತದೆ. ಮೇಲಿನ ವಿಷಯದ ಬಗ್ಗೆ ಈಗ ನೋಡುತ್ತಿರುವ ಗಾಯದ ಪ್ರಮಾಣಪತ್ರವನ್ನು ನಾನು ನೀಡಿದ್ದು ಅದರಲ್ಲಿ ಇರುವ ಸಹಿ ನನ್ನದೆ. ಗಾಯದ ಪ್ರಮಾಣಪತ್ರ ನಿಪಿ-18, ಸಾಕ್ಷಿಯ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು.

ನಂತರ ಸದರಿ ಕೃತ್ಯದಲ್ಲಿ ಮೃತರಾದ ಪೂಜಾ ಹಿರೇಮಠ್ ಮತ್ತು ನಿರಂಜನ್ ಹಿರೇಮಠ್ ರವರ ಮರೋಣೋತ್ತರ ಪರೀಕ್ಷೆ ಮಾಡಿರುವ ಬಗ್ಗೆ ಈಗ ನೋಡುತ್ತಿರುವ ಶವಪರೀಕ್ಷಾ ವರದಿಯನ್ನು ನೀಡಿರುತ್ತೇನೆ. ಸಾಕ್ಷಿಯು ಗುರುತಿಸಿರುವ ಶವಪರೀಕ್ಷಾ ವರದಿಗಳನ್ನು ನಿಪಿ-19 ಮತ್ತು 20, ಸಾಕ್ಷಿಯ ಸಹಿಗಳನ್ನು ನಿಪಿ-19(ಎ) ಮತ್ತು 20(ಎ) ಎಂದು ಗುರುತಿಸಲಾಯಿತು. ಪೂಜಾ ಹಿರೇಮಠ್ ರವರು ಮೆದುಳು, ಶ್ವಾಸಕೋಶಗಳು, ಲಿವರ್, ಮೆದುಳಿನ ಪದರದಲ್ಲಿ ರಕ್ತ ಹೆಪ್ಪುಗಟ್ಟುವಿಕೆ, ಶ್ವಾಸಕೋಶ ಮತ್ತು ಹೊಟ್ಟೆಯಲ್ಲಿ ರಕ್ತಸ್ರಾವವಾದ ಕಾರಣ ಸಾವನ್ನಪ್ಪಿರುತ್ತಾರೆ. ನಿರಂಜನ್ ಹಿರೇಮಠ್ ರವರು ಮೆದುಳು, ಶ್ವಾಸಕೋಶಗಳು, ಲಿವರ್, ಮೆದುಳಿನ ಪದರದಲ್ಲಿ ರಕ್ತ ಹೆಪ್ಪುಗಟ್ಟುವಿಕೆ ಮತ್ತು ಹೊಟ್ಟೆಯಲ್ಲಿ ರಕ್ತಸ್ರಾವವಾದ ಕಾರಣ ಮೃತಪಟ್ಟಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಎಂ.ಆರ್. ವಕೀಲರಿಂದಃ**

ಗಾಯದ ಪ್ರಮಾಣಪತ್ರ ಮತ್ತು ಮರಣ ಪರೀಕ್ಷಾ ವರದಿಗಳಲ್ಲಿ ನಮೂದಿಸಿರುವ ಗಾಯಗಳು ವಾಹನವನ್ನು ವೇಗವಾಗಿ ಚಲಾವಣೆ ಮಾಡುವಾಗ ಅಪಘಾತವಾದರೆ ಆಗುತ್ತವೆ ಎಂದರೆ ಇರಬಹುದು. ಯಾರ ತಪ್ಪಿನಿಂದ ಅಪಘಾತವಾಯಿತೆಂದು ನಿಪಿ-18 ರಲ್ಲಿ ಮಾಹಿತಿ ಇಲ್ಲ ಎಂದರೆ ಸರಿ. ಚಾಸಾ-1 ರವರನ್ನು ಖಾಸಗಿ ಆಂಬುಲೆನ್ಸ್ ರವರು ಕರೆದುಕೊಂಡು ಬಂದಿದ್ದರು. ನಿಪಿ-18 ರಿಂದ 20 ರ ದಾಖಲೆಗಳನ್ನು ಪ್ರಕರಣಕ್ಕೆ ಉಪಯೋಗವಾಗುವಂತೆ ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರಧನ್ಯಾದಂ., ಮೂಡಿಗೆರೆ.